■ ವಿಶಾಖ ಎನ್.

# ಸಾಹಿತ್ಯೋತ್ಸವದಲ್ಲಿ ಸಿನಿಮಾ ಮಂದಿ



'ಬಿಎಲ್‌ಎಫ್'ನಲ್ಲಿ ನಟಿ, ಚಿತ್ರಕಥಾ ಲೇಖಕಿ ಹನಿ ಇರಾನಿ

'ಬೆಂಗಳೂರು ಸಾಹಿತ್ಯ ಉತ್ಸವ'ಕ್ಕೆ ಈ ಸಲ ಸಿನಿಮಾದ ಗಂಧ ತೀಡಲಾಗಿತ್ತು. ಪುನೀತ್ ರಾಜ್‌ಕುಮಾರ್ ಅವರಿಗೂ ಸಾಹಿತ್ಯಕ್ಕೂ ನೇರಾನೇರ ಸಂಬಂಧ ಇರದೇ ಇದ್ದರೂ ಅವರ ನೆನಕೆಯ ಮೆರವಣಿಗೆ ಅಲ್ಲಿಯೂ ಇತ್ತು. ವೇದಿಕೆಗಳಿಗೆ 'ಗಂಧದಗುಡಿ', 'ರಾಜಕುಮಾರ', 'ಯುವರತ್ನ' ಎಂದೆಲ್ಲ ಹೆಸರಿಟ್ಟದ್ದೇ ಇದಕ್ಕೆ ಸಾಕ್ಷಿ. ಪುನೀತ್ ನೆನಕೆಯ ಕುರಿತು ಒಂದು ಗೋಷ್ಠಿಯೂ ಇತ್ತು. ರಾಜ್‌ಕುಮಾರ್ ಹಾಗೂ ಅವರ ಮೌಲ್ಯಗಳ ವಾರಸುದಾರನಾಗಿ ಪುನೀತ್ ಇನ್ನೂ ಎತ್ತರಕ್ಕೆ, ಬಹಳ ಎತ್ತರಕ್ಕೆ ಏರಿದ್ದನ್ನು ಅದರಲ್ಲಿ ಮುಗುಮ್ಮಾಗಿ ನೆನಪಿಸಿಕೊಳ್ಳಲಾಯಿತು.

ನಟೇಶ್ ಹೆಗಡೆ ನಿರ್ದೇಶನದ 'ಪೆದ್ರೊ' ಸಿನಿಮಾಕ್ಕೆ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅವಕಾಶ ದೊರೆತಿರಲಿಲ್ಲ. ಆದರೆ, ಇಲ್ಲಿ ಅವರಿಗೆ ಅನಿಸಿಕೆ ಹಂಚಿಕೊಳ್ಳಲು ವೇದಿಕೆ ಸಿಕ್ಕಿತು. ಪರೇಶ್ ಮೇಸ್ತ ಹತ್ಯೆಯ ಸುದ್ದಿ ಹಾಗೂ ಅದರ ಸುತ್ತಲಿನ ಘಟನೆಗಳು ತಮ್ಮ ಸಿನಿಮಾದ ಶಿಲ್ಪಕ್ಕೆ ಪೂರಕವಾಗಿ ಒದಗಿಬಂದದ್ದನ್ನು ಅವರು ಹೇಳಿಕೊಂಡರು. ನೀರಮೇಲೆ ತೇಲುವ ಸುಟ್ಟ ದೇಹದ ತರುಣನ ಶವ ಅವರ ಎದೆಯೊಳಗೆ ಇಳಿದು ಅಲ್ಲಾಡಿಸಿದ್ದರ ಫಲವೇ ಆ ಸಿನಿಮಾ ಹರಳುಗಟ್ಟಿದ್ದು ಎಂದು ನೆನಪಿಸಿಕೊಂಡರು.

ಕೆಲವು ಗೋಷ್ಠಿಗಳನ್ನು ಪತ್ರಕರ್ತ–ಪತ್ರಕರ್ತೆಯರು ನಿರೂಪಿಸಿದ್ದು ಗಮನಾರ್ಹ. ಫರ್ಹಾನ್ ಅಖ್ತರ್ ಹಾಗೂ ಅವರ ತಾಯಿ ಹನಿ ಇರಾನಿ ಇಬ್ಬರೂ ಒಂದೇ ವೇದಿಕೆ ಮೇಲಿದ್ದರು. 1980ರಲ್ಲಿ 'ಕ್ಯಾ ಕೆಹ್ನಾ' ಹಿಂದಿ ಚಲನಚಿತ್ರಕ್ಕೆ ಕತೆ ಬರೆದ ಪ್ರಸಂಗವನ್ನು ಅವರು ಮೆಲುಕು ಹಾಕಿದರು: 'ಪತ್ರಿಕೆಯೊಂದರಲ್ಲಿ ಬಾಲಕಿ ಮೇಲೆ ಅತ್ಯಾಚಾರ ನಡೆದ ಸುದ್ದಿಯೊಂದು ಪ್ರಕಟವಾಗಿತ್ತು. ಅದನ್ನು ಓದಿದೆ. ದೇಶದ ಯಾವುದೋ ಹಳ್ಳಿಯ ಹುಡುಗಿ. ಅವಳ ಮೇಲೆ ಅತ್ಯಾಚಾರ ಎಸಗಿದವನನ್ನು ಊರ ಜನರೆಲ್ಲಾ ಹಿಡಿದುತಂದು ಒಪ್ಪಿಸಿ ಅವಳೊಟ್ಟಿಗೇ ಮದುವೆ ಮಾಡಲು ನಿರ್ಧರಿಸಿದ್ದ ಸುದ್ದಿ ಅದು. ನನ್ನನ್ನು ಅದು ಕಾಡಿತು. ಅತ್ಯಾಚಾರ ಮಾಡಿದವನ ಜತೆ ಜೀವನಪೂರ್ತಿ ಕಥೆಯ ನಾಯಕಿ ಯಾಕೆ ಬದುಕಬೇಕು ಎಂದು ಒಳಮನಸ್ಸು ಹೇಳಿತು. ಅದಕ್ಕೇ ನಾನು ಕಥೆಯಲ್ಲಿ ಅದನ್ನು ಬದಲಿಸಿದೆ. ಅತ್ಯಾಚಾರಿ ಜತೆ ಮದುವೆಯಾಗಲು ನಿರಾಕರಿಸುವಂತೆ ಪಾತ್ರವನ್ನು ಬದಲಿಸಿ ಬರೆದೆ.'

'ಪಡ' ಮಲಯಾಳಂ ಸಿನಿಮಾ ನಿರ್ದೇಶಕ ಕಮಲ್ ಅವರಂತೂ ಬಾಲಿವುಡ್ ತಾನು ಹೇಗೆ ಹಿಂದೂ ಸಂಕಥನಗಳನ್ನು ಕಟ್ಟಿಕೊಳ್ಳುತ್ತಾ ಅದನ್ನೇ ಬಲೆಯಾಗಿಸಿಕೊಂಡು ನಲುಗುತ್ತಿದೆ' ಎಂದು ವಿಮರ್ಶಾತ್ಮಕವಾಗಿ ಹೇಳಿದರು. ಅವರೂ ಸುದ್ದಿಯನ್ನು ಗಂಭೀರವಾಗಿ ಓದುತ್ತಾ, ಅದರಿಂದ ಪ್ರೇರಣೆ ಪಡೆದೇ ಚಿತ್ರಕಥೆ ಬರಹವನ್ನು ಆಗೀಗ ಮಾಡಿರುವುದಕ್ಕೆ ಉದಾಹರಣೆಯಾಗಿ ನೀಡಿದರು.

'ಲಿಪ್‌ಸ್ಟಿಕ್ ಅಂಡರ್ ಮೈ ಬುರ್ಖಾ' ಎಂಬ ಹೆಣ್ಣುಕಣ್ಣಿನ ಧಾರ್ಷ್ಟ್ಯದ ಸಿನಿಮಾ ನಿರ್ದೇಶಿಸಿದ ಅಲಂಕೃತಾ ಶ್ರೀವಾಸ್ತವ ಮಾತ್ರ, 'ಸುದ್ದಿಯನ್ನು ಓದಿ ತಾವು ಸಿನಿಮಾ ಮಾಡುವುದಿಲ್ಲ' ಎಂದರು. 'ಮನುಷ್ಯಸಂವಾದಗಳಿಂದಲೇ ಹೂರಣ ಪಡೆದುಕೊಳ್ಳುವುದು ತಮ್ಮ ಜಾಯಮಾನ' ಎಂದರು.

ಫರ್ಹಾನ್ ಅಖ್ತರ್ ಅವರಿಂದ ಕವನ ವಾಚನ ಮಾಡಿಸಿ, ಅಭಿಮಾನಿಗಳು ಮೊಬೈಲ್ ಬೆಳಕುಗಳನ್ನು ಅವರ ಮುಖಕ್ಕೆ ಬೀರುತ್ತಾ ಸುಖಿಸಿದರು. ಸಾಹಿತ್ಯ ಉತ್ಸವಕ್ಕೂ ಸಿನಿಮಾ ಈಗ ಯಾಕೆಲ್ಲ ಮುಖ್ಯವಾಗುತ್ತಿದೆ ಎನ್ನುವುದಕ್ಕೆ ಮೇಲಿನವೆಲ್ಲ ಕೆಲವು ಝಲಕ್‌ಗಳಷ್ಟೆ. ■



# ಶಿವಾಜಿಯಾಗಿ ಅಕ್ಷಯ್

ಅಕ್ಷಯ್‌ಕುಮಾರ್ ಐತಿಹಾಸಿಕ ಪಾತ್ರಗಳ ಮೋಹವನ್ನು ಮತ್ತೆ ಮತ್ತೆ ಉಜ್ಜತೊಡಗಿದ್ದಾರೆ. ಈಗ ಅವರು 'ವೇಡಾತ್ ಮರಾಠೆ ವೀರ್ ದೌಡಲೆ ಸಾಥ್' ಎಂಬ ಮರಾಠಿ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ಇದು ಅವರ ಮೊದಲ ಮರಾಠಿ ಚಿತ್ರ. ಮಹೇಶ್ ಮಂಜ್ರೇಕರ್ ಈ ಸಿನಿಮಾ ನಿರ್ದೇಶಿಸಲಿದ್ದಾರೆ. ವಸೀಂ ಖುರೇಷಿ ಈ ಸಿನಿಮಾ ನಿರ್ಮಾಪಕರು.

ಚಿತ್ರೀಕರಣ ಶುರುವಾದ ಸಂಗತಿಯನ್ನು ಅಕ್ಷಯ್ ಹೆಮ್ಮೆಯಿಂದ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡರು. ಶಿವಾಜಿ ಮಹಾರಾಜ್ ಪಾತ್ರದಲ್ಲಿ ಅವರು ನಟಿಸುತ್ತಿರುವುದು ವಿಶೇಷ. ಶಿವಾಜಿ ಫೋಟೊ ಎದುರು ಕೈಮುಗಿದು ನಿಂತು ಆಶೀರ್ವಾದ ಬೇಡಿದ್ದನ್ನೇ ಕ್ಲಿಕ್ ಮಾಡಿಸಿಕೊಂಡು, ಅವರು ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಸಾಮ್ರಾಟ್ ಪೃಥ್ವಿರಾಜ್ ಪಾತ್ರದಲ್ಲಿ ಅವರು ಅಭಿನಯಿಸಿದ್ದು, ಆ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಸೋತಿತ್ತು. ಶಿವಾಜಿಗೆ ಜನಬೆಂಬಲ ದೊರೆಯಲಿದೆ ಎನ್ನುವುದು ಅವರ ನಿರೀಕ್ಷೆ. ■